**RA.No**. 30/2024 **PW**-1

**ದಿನಾಂಕಃ 03.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು ಎದುರುದಾರರ ಪರ ಶ್ರೀ. ಎಸ್ .ಎ. ವಕೀಲರಿಂದಃ**

ನನಗೆ ಒಂದು ವರ್ಷದ ಹಿಂದೆ ಜಾಂಡೀಸ್ ಖಾಯಿಲೆ ಆಗಿತ್ತು, ಅಲ್ಲದೆ ನನಗೆ ಅಸ್ತಮಾ ಸಹ ಇದ್ದು ಮಳೆಯೆಲ್ಲಾ ಜಾಸ್ತಿ ಆದಾಗ ನನಗೆ ಆರೋಗ್ಯ ಸಮಸ್ಯೆ ಉಂಟಾಗುತ್ತದೆ. ನಾನು ಶಿವಮೊಗ್ಗದಲ್ಲಿ ನಾಟಿ ಔಷಧಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಕಳೆದ 20 ವರ್ಷಗಳಿಂದ ಅಸ್ತಮಾಕ್ಕೆ ಚಿಕಿತ್ಸೆ ಪಡೆಯುತ್ತಿದ್ದೇನೆ, ಈ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನನಗೆ ಯಾವುದೇ ಖಾಯಿಲೆಗಳು ಇಲ್ಲದೇ ಇದ್ದರೂ ಸಹಿತ ಉದ್ದೇಶ ಪೂರ್ವಕವಾಗಿ ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ 97 ದಿನ ತಡವಾಗಿ ಅಪೀಲು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಹೊಳೆನರಸೀಪುರದಿಂದ ನಮ್ಮ ಊರು ಎಷ್ಟು ದೂರ ಅಗುತ್ತದೆ ಎಂದು ಗೊತ್ತಿಲ್ಲ ಆದರೆ ಬೈಕಿನಲ್ಲಿ ಹೋದರೆ ಅರ್ಧ ಗಂಟೆ ಆಗುತ್ತದೆ. ಮನೆಯ ಸಾಮಾಗ್ರಿಗಳನ್ನು ಪಡೆಯಲು ಹಾಗೂ ಏನೇ ವಸ್ತು ಬೇಕಾದರೂ ಸಹ ಹೊಳೆನರಸೀಪುರಕ್ಕೆ ಬರಬೇಕು ಎಂದರೆ ಹೌದು .ಈ ರೀತಿ ಅವಶ್ಯಕ ವಸ್ತುಗಳನ್ನು ಪಡೆಯಲು ನಾನಾಗಲಿ ಅಥವಾ ನನ್ನ ಕುಟುಂಬದವರಾಗಲಿ ಹೊಳೆನರಸೀಪುರಕ್ಕೆ ಬರುತ್ತಲೇ ಇರುತ್ತೇವೆ ಎಂದರೆ ಹೌದು. ಈ ರೀತಿ ಹೊಳೆನರಸೀಪುರಕ್ಕೆ ಬಂದಾಗ ವಕೀಲರ ಕಛೇರಿಗೆ ಭೇಟಿ ನೀಡಿ ದಾವೆಯ ಬಗ್ಗೆ ತಿಳಿದುಕೊಳ್ಳಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನನ್ನನ್ನು ಆಸ್ಪತ್ರೆಗೆ ಆಗಾಗ ಕರೆದುಕೊಂಡು ಹೋಗಿದ್ದರಿಂದ ತಿಳಿದುಕೊಂಡಿಲ್ಲ ಎಂದು ನುಡಿಯುತ್ತಾರೆ. ನಾನು ಮಧ್ಯಂತರ ಅರ್ಜಿ 1 ಅನ್ನು ಪುರಸ್ಕರಿಸಲು ಯಾವುದೇ ಸಕಾರಣಗಳನ್ನು ಹೇಳಿಲ್ಲ ಎಂದರೆ ಸರಿಯಲ್ಲ. ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದಲೇ ಈ ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**RA.No**. 30/2024 **PW**-1

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.